4 ಬಹುತೇಕ ಸಮಯದಲ್ಲಿ ಇದು ಸಾಧ್ಯ. ಕೆಲವೊಮ್ಮೆ ತುಂಬಾ ಸಮಯ ತೆಗೆದುಕೊಂಡು ಬರೆದ ಹಾಡುಗಳು ಹಿಟ್ ಆಗದೇ ಇರಬಹುದು. ಕಡಿಮೆ ಅವಧಿಯಲ್ಲಿ ಬರೆದ ಹಾಡುಗಳು ಹಿಟ್ ಆಗಬಹುದು. ಅವಧಿಗೂ ಅದಕ್ಕೂ ಸಂಬಂಧವಿಲ್ಲ. ಸ್ವಲ್ಪ ಸಮಯಾವಕಾಶ ಕೊಟ್ಟಾಗ ಕವಿ ಒಂಚೂರು ಆಳಕ್ಕೆ ಇಳಿದು ಯೋಚನೆ ಮಾಡುವಂತಹ ಅವಕಾಶವಿರುತ್ತದೆ. ಅದರಿಂದ ಒಳ್ಳೆಯ ಸಾಹಿತ್ಯ ಹೊರಬರುತ್ತದೆ.

5 ಪ್ರಾಮಾಣಿಕವಾಗಿ ಹೇಳುವುದಾದರೆ ನಾನು ಬರೆದ ಹಾಡುಗಳನ್ನು ಮರೆತುಬಿಡುತ್ತೇನೆ. ಆ ಹಾಡು ಹಿಟ್ ಆಗಬಹುದು, ಆಗದೇ ಇರಬಹುದು. ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲ್ಲ. ಏಕೆಂದರೆ ಹಾಡು ಬರೆಯುವವರೆಗೂ ನಮ್ಮದು, ಬರೆದ ಮೇಲೆ ಅದು ಜಗತ್ತಿನದ್ದು. ನಾನು ಬರೆದ ಯಾವ ಹಾಡಿನ ಬಗ್ಗೆಯೂ ನನಗೆ ಪ್ರೀತಿ ಇಲ್ಲ. ವ್ಯಾಮೋಹನೂ ಇಲ್ಲ. ಆ ಹಾಡು ಆ ಸಂದರ್ಭಕ್ಕೆ ಘಟಿಸಿದ ಹಾಡಾಗಿರುತ್ತದೆ. ಹೂ ಪ್ರತಿ ಸಲ ಅರಳುತ್ತಿರುತ್ತದೆ. ಅರಳಿದ ಮೇಲೆ ಅದು ಉದುರುತ್ತದೆ. ಆದರೆ ಗಿಡ ಮಾತ್ರ ಒಂದೇ. ಹೂ ಉದುರಿದ ಮೇಲೆ ಅದನ್ನು ಮರೆತು ಹೊಸದಾಗಿ ಆ ಗಿಡ ಹೂ ಬಿಡುತ್ತದೆ. ಅದೇ ರೀತಿ, ಒಂದು ಕವಿತೆ ಈಚೆ ಬರುವುದೆಂದರೆ ಆ ಗಿಡದಿಂದ ಉದುರಿದ ಹೂವಿನಂತೆ. ಅದರ ಬಗ್ಗೆ ವ್ಯಾಮೋಹ ಇಟ್ಟುಕೊಳ್ಳಬಾರದು. ಹೊಸ ಹೂ, ಹೊಸ ಹಣ್ಣು, ಹೊಸ ಚಿಗುರು ಬರುತ್ತಲೇ ಇರುತ್ತದೆ.

6 ಒಳ್ಳೊಳ್ಳೆ ಹಾಡುಗಳು ಸಾಕಷ್ಟಿವೆ. ಕಾಲಾನುಕ್ರಮದಲ್ಲಿ ಅವುಗಳ ಸ್ವರೂಪ ಬದಲಾಗುತ್ತವೆ. ರಚನಾಕ್ರಮ, ನಿರ್ದೇಶಕರ ಅಭಿರುಚಿ, ಸಂಗೀತದಲ್ಲಿನ ಹೊಸತನ ಹಾಗೂ ಪ್ರಯೋಗದಿಂದ ಬದಲಾವಣೆ ಆಗುತ್ತದೆ. ಚಿ. ಉದಯಶಂಕರ್ ಕಾಲದಲ್ಲಿ ಅವತ್ತಿಗೆ ಅವರು ಬರೆಯುತ್ತಿದ್ದದ್ದು ಸರಳವಾಗಿತ್ತು. ಆರ್.ಎನ್. ಜಯಗೋಪಾಲ್ ಕಾವ್ಯಾತ್ಮಕವಾಗಿ ಬರೆದರು. ಹಂಸಲೇಖ ಹಾಡು ಭಾಷೆ ತಂದರು. ವಿ. ಮನೋಹರ್ ಸಾಹಿತ್ಯದ ಸೌಂಡಿಂಗ್ ಚೆನ್ನಾಗಿದೆ. ಕಲ್ಯಾಣ್ ಕಾವ್ಯಾತ್ಮಕವಾಗಿ ಹೋದರು. ನಾಗೇಂದ್ರ ಪ್ರಸಾದ್ ಸಿಂಪಲ್ ಆಗಿ ಗುರುತಿಸಿಕೊಂಡರು. ಜಯಂತ ಕಾಯ್ಕಿಣಿ ಮತ್ತೆ ಕಾವ್ಯಾತ್ಮಕವಾಗಿ, ಯೋಗರಾಜ್ ಭಟ್ ಸರಳವಾಗಿ ಬರೆದರು.

7 ಕಾಲ ಸರಿದಂತೆ ಹೊಸಬರು ಬರ್ತಾನೆ ಇರ್ತಾರೆ. ಹಳಬರು ಸಹ ಬರೆಯುತ್ತಿರಬೇಕು. ಹಳಬರು ಹೊಸದಾಗಿ ಒಗ್ಗಿಕೊಳ್ಳಬೇಕಲ್ಲ. ಅದು ಕಸುಬಿನ ದೃಷ್ಟಿಯಿಂದ ಮುಖ್ಯವಾದ ಅಂಶ. ಈಗ 'ನಾಯಗನ್' ಮಾಡಿದಂತೆ ಮಣಿರತ್ನಂ 'ಒಕೆ ಕಣ್ಮಣಿ' ಮಾಡಬೇಕಲ್ವಾ. ಇದು ಸಾಧ್ಯವಾಗಬೇಕಾದರೆ ಕಾಲಾನುಕ್ರಮದಲ್ಲಿ ಕಾಲಕ್ಕನುಗುಣವಾಗಿ ತನ್ನೊಳಗಿನ ಕವಿಯನ್ನು ಸೃಜನಶೀಲತೆಯನ್ನು ಆಧುನಿಕ ಜಗತ್ತಿಗೆ ಬೇಕಾದ ರೀತಿಯಲ್ಲಿ ಒಗ್ಗಿಸಿಕೊಳ್ಳುವುದು ಅನಿವಾರ್ಯ. ಆ ಪ್ರಯತ್ನಗಳು ಆದಾಗ ಅವರು ದೀರ್ಘಕಾಲಿಕವಾಗಿ ಉಳಿದುಬಿಡುತ್ತಾರೆ.

8 ಖಂಡಿತಾ ಇರುತ್ತದೆ. ಮೊದಲ ಸಲ ಪಲ್ಲವಿ ಎರಡು ಚರಣ ಬರೆದಾಗ ಖುಷಿ ಕೊಟ್ಟಿರುತ್ತದೆ. ಟ್ಯೂನ್‌ಗೆ, ಸಂದರ್ಭಕ್ಕೆ ಅದು ಪೂರಕವಾಗಿರುತ್ತದೆ. ಆದರೆ, ನಿರ್ದೇಶಕ ಬಂದು ಇದು ಚೇಂಜ್ ಮಾಡಿ ಪದ ಸರಿ ಬರಲ್ಲ, ಅದು ಅರ್ಥ ಆಗಲ್ಲ ಎನ್ನುತ್ತಾರೆ. ಈ ರೀತಿ ಆದಾಗ ಕೆಲವೊಮ್ಮೆ ಇನ್ನೂ ಚೆನ್ನಾಗಿ ಹಾಡು ರೂಪುಗೊಳ್ಳುತ್ತದೆ. ಬಹುತೇಕ ಸಮಯದಲ್ಲಿ ಹದಗೆಡುತ್ತದೆ.